ಈಗಲೂ 'ಕೋಲ್ಡ್ ವಾರ್ ಹೀರೋಸ್' ಎನ್ನುವುದುಂಟು. ಅಮೆರಿಕ ಕೈಕಟ್ಟಿ ಕುಳಿತೀತೆ? ಟ್ರೂಮನ್, ಐಸನ್‌ಹೊವರ್, ಕೆನಡಿ, ಲಿಂಡನ್ ಬಿ. ಜಾನ್ಸನ್, ನಿಕ್ಸನ್ ಇದನ್ನು ಪ್ರತಿಷ್ಠೆಯಾಗಿ ಕಂಡರು. ವಿಸ್ಮಯವೆಂದರೆ ಈ ಹಂತದಲ್ಲೇ ಎರಡೂ ದೇಶಗಳು ವ್ಯೋಮಯಾನದಲ್ಲಿ ಸೋಲಿನ ಸರಣಿಯನ್ನೇ ಕಂಡದ್ದು ಹೆಚ್ಚು.

ಸೋವಿಯತ್ ಒಕ್ಕೂಟ ಚಂದ್ರಯಾನದ ಒಂದು ಭಾಗವಾಗಿ 1958ರಲ್ಲೇ ಲ್ಯೂನಾ ಶ್ರೇಣಿಯ ನೌಕೆಗಳನ್ನು ಅಂತರಿಕ್ಷಕ್ಕೆ ಉಡಾವಣೆ ಮಾಡುತ್ತ ಬಂತು. ಅವಕ್ಕೆ ನಿಶ್ಚಿತ ಹೆಸರನ್ನೂ ಕೊಟ್ಟಿರಲಿಲ್ಲ. ಒಂದುವೇಳೆ ವಿಫಲವಾದರೆ ಅದು



ಲ್ಯೂನಾ16 ಚಂದ್ರನ ಮೊದಲ ಮಣ್ಣನ್ನು ಸಂಗ್ರಹಿಸಿದ ಮೊದಲ ಅಂತರಿಕ್ಷ ನೌಕೆ

ಜಗಜ್ಜಾಹೀರಾಗಬಾರದಲ್ಲ ಎಂಬ ಕಿಲಾಡಿ ತಂತ್ರ ಇದು. ಇದೆಲ್ಲ ಜಗತ್ತಿಗೆ ಗೊತ್ತಾದದ್ದು 1991ರಲ್ಲಿ ಸೋವಿಯತ್ ಒಕ್ಕೂಟ ಕುಸಿದಾಗಲೇ. ಆರಂಭದಲ್ಲಿ ಯಶಸ್ವಿಯಾಗಿ ನೌಕೆಗಳನ್ನು ಚಂದ್ರನ ಕಕ್ಷೆಗೆ ಸೇರಿಸುವುದು ಆದ್ಯತೆಯ ಪ್ರಯೋಗ. ಇದರ ಭಾಗವಾಗಿಯೇ ಜನ್ಮತಾಳಿದ್ದು 'ಲ್ಯೂನಾ' ಸರಣಿಯ ನೌಕೆಗಳು ಮತ್ತು ಕಾಸ್ಮೋಸ್ ಸರಣಿ. 1958ರಿಂದ 1975ರವರೆಗೆ ಸೋವಿಯತ್ ಒಕ್ಕೂಟ ಕಕ್ಷೆಗೆ ಉಡಾವಣೆ ಮಾಡಿದ 13 ವ್ಯೋಮನೌಕೆಗಳಲ್ಲಿ ಲ್ಯೂನಾ–2 ಮತ್ತು ಲ್ಯೂನಾ–3 ಮಾತ್ರ

## ಚಂದ್ರನ ಕಲ್ಲಿಗೆ ಕಿಮ್ಮತ್ತು

ಚಂದ್ರನಲ್ಲಿ ಏನಿದೆ ಎಂದು ಪ್ರಶ್ನೆ ಕೇಳಿದವರಲ್ಲಿ ಸಾಮಾನ್ಯ ಜನರಿಗಿಂತ ವಿಜ್ಞಾನಿಗಳ ಕುತೂಹಲವೇ ಹೆಚ್ಚು. ಚಂದ್ರನ ಮೇಲೆ ಉಲ್ಕೆಗಳು ಬಡಿದು ಎದ್ದ ಚೂರುಗಳು ಎಗರಿಬಿದ್ದು ಲಕ್ಷ ಲಕ್ಷ ವರ್ಷಗಳವರೆಗೆ ಕಕ್ಷೆಯಲ್ಲೇ ಸುತ್ತಾಡಿ ಕೊನೆಗೆ ಅಂಟಾರ್ಕ್‌ಟಿಕ ಖಂಡದಲ್ಲಿ ಬಿದ್ದ ಮಾದರಿಗಳನ್ನು ವಿಜ್ಞಾನಿಗಳು ಸಂಗ್ರಹಿಸಿದ್ದರು. ಆದರೆ ಖಚಿತವಾಗಿ ಅವು ಚಂದ್ರನಿಂದಲೇ ಬಂದದ್ದು ಎನ್ನುವ ಪ್ರಶ್ನೆಗೆ ಸಮಾಧಾನಕರ ಉತ್ತರ ಇರಲಿಲ್ಲ. ಅಪೊಲೋ–11ರಿಂದ ತೊಡಗಿ ಅಪೊಲೋ–17ರವರೆಗೆ ಕೈಗೊಂಡ ಮಾನವಸಹಿತ ಚಂದ್ರಯಾನದಲ್ಲಿ ಇಡೀ ಚಂದ್ರನ ಹೆಚ್ಚಿನ ಭಾಗದಲ್ಲಿ ಅಡ್ಡಾಡಿ ಶಿಲೆಗಳನ್ನು ಸಂಗ್ರಹಿಸಲಾಯಿತು. ಹೆಚ್ಚಿನ ಪಾಲು ಚಂದ್ರ ಶಿಲೆಗಳನ್ನು ಅಪೊಲೋ ಯಾತ್ರಿಗಳು ಸಂಗ್ರಹಿಸಿದ್ದುದು ಚಂದ್ರನ ಮೇರಿಯ ಎಂಬ ಭಾಗದಿಂದ. ಇದೇ ನಮಗೆ ಚಂದ್ರನಲ್ಲಿ ಕಪ್ಪು ತೇಪೆಯಂತೆ ಕಾಣುವುದು.

ಅಪೊಲೋ–11ರ ಚಂದ್ರಯಾನದಿಂದ ಬುವಿಗೆ ಬಂದದ್ದು 21.55 ಕಿಲೋ ಗ್ರಾಂ ಶಿಲೆ. ಇದೇ ಕನಿಷ್ಠ. ಅಪೊಲೋ–17ರಲ್ಲಿ ಬರೋಬ್ಬರಿ 110.40 ಕಿಲೋ ಗ್ರಾಂ ಶಿಲಾಮಾದರಿಗಳನ್ನು ಅಲ್ಲಿಗೆ ಹೋಗಿದ್ದ ಭೂವಿಜ್ಞಾನಿ ಸ್ಮಿತ್ ಸಂಗ್ರಹಿಸಿದ್ದ. ಈ ಆರೂ ಯಾನದಿಂದ ತಂದ ಒಟ್ಟು ಶಿಲೆಯ ತೂಕ 382 ಕಿಲೋ ಗ್ರಾಂ. ಆದರೆ ಅಮೆರಿಕದ ಸಮೀಪದ ಪ್ರತಿಸ್ಪರ್ಧಿ ಸೋವಿಯತ್ ರಷ್ಯಾ ಕೂಡ ಚಂದ್ರ ಶಿಲೆಯನ್ನು ಇದಕ್ಕೂ ಮೊದಲೇ ಸಂಗ್ರಹಿಸಿತ್ತು. 1970–76ರ ನಡುವೆ ಕೈಗೊಂಡ ಲ್ಯೂನಾ–16, 20, 24ರ ಚಂದ್ರಯಾನದಿಂದ ಸಂಗ್ರಹಿಸಿ ತಂದ ಶಿಲೆ ಕೇವಲ 301 ಗ್ರಾಂ. ಮುಂದೆ ಈ ಕಲ್ಲಿಗೆ ಬೆಳ್ಳಿ, ಬಂಗಾರಕ್ಕಿಂತ ಹೆಚ್ಚು ಬೆಲೆ ಬಂತು. ಇವುಗಳ ವಯೋನಿರ್ಧಾರವೂ ಆಗಿ ಭೂಮಿ ಹುಟ್ಟಿದ ನಂತರ ಚಂದ್ರ ಹುಟ್ಟಿತ್ತೆಂಬ ಊಹೆಗೆ ಪುರಾವೆ ಸಿಕ್ಕಿತು.

ಅಪೊಲೋ ಯಾತ್ರೆಯಿಂದ ತಂದ ಚಂದ್ರ ಶಿಲೆಯನ್ನು ಹೂಸ್ಟನ್ನಿನ 'ಲಿಂಡನ್ ಬಿ. ಜಾನ್ಸನ್ ಅಂತರಿಕ್ಷ ಕೇಂದ್ರ'ದಲ್ಲಿ ಭದ್ರವಾಗಿ ಇಡಲಾಗಿದೆ. ಹೇಗಾದರೂ ಆಗಲಿ ಆಪತ್ತಿಗೆ ಒದಗಿ ಬರಲಿ ಎಂದು ಸ್ವಲ್ಪ ಭಾಗವನ್ನು ನ್ಯೂ ಮೆಕ್ಸಿಕೋದ ಲಾಸ್ ಕ್ರುನನ್‌ನಲ್ಲಿರುವ ವೈಟ್ ಸ್ಯಾಂಡ್ ಪ್ರಯೋಗಾಲಯದಲ್ಲೂ ಇರಿಸಿದ್ದಾರೆ. ಇವಕ್ಕೆ ನಿಜವಾದ ಕಿಮ್ಮತ್ತು ಕಟ್ಟುವವರು ಇದ್ದಾರೆ. ಇಡೀ ಅಪೊಲೋ ಚಂದ್ರಯಾನಕ್ಕೆ ಅಮೆರಿಕದ ಮಾಡಿದ ಖರ್ಚು ಇಂದಿನ ಲೆಕ್ಕದಲ್ಲಿ 200 ಬಿಲಿಯನ್ ಡಾಲರ್. ಈ ಲೆಕ್ಕದಲ್ಲಿ ಪ್ರತಿ ಒಂದು ಗ್ರಾಂ ಚಂದ್ರನ ಶಿಲೆಗೆ 60 ಸಾವಿರ ಡಾಲರ್ ಕಿಮ್ಮತ್ತು. ವಜ್ರ, ಬೆಳ್ಳಿ, ಬಂಗಾರಕ್ಕೆ ಎಲ್ಲಿದೆ ಈ ಬೆಲೆ?

ಅಪೊಲೋ–17ರಲ್ಲಿ ಸಂಗ್ರಹಿಸಿದ್ದ 110.40 ಕಿಲೋ ಗ್ರಾಂ ಚಂದ್ರಶಿಲೆ ಭೂಮಿಗೆ ಬಂದ ಮೇಲೆ ಅಮೆರಿಕದ ಅಧ್ಯಕ್ಷ ನಿಕ್ಸನ್ ಅವರು ಅಮೆರಿಕದ ಎಲ್ಲ 50 ರಾಜ್ಯಗಳಿಗೂ 135 ವಿದೇಶದ ಅಧ್ಯಕ್ಷರಿಗೂ ಸ್ವಲ್ಪವಾದರೂ ಇದರ ಮಾದರಿಯನ್ನು ಹಂಚಿ ಎಂಬ ಔದಾರ್ಯ ತೋರಿದರು. ಉಳಿದ ದೇಶಗಳಿಗೆ ಇದು ಬಯಸದೇ ಬಂದ ಭಾಗ್ಯ. ಇದನ್ನು 'ಗುಡ್‌ವಿಲ್ ಮೂನ್‌ರಾಕ್' ಎಂದೇ ಕರೆದರು. 1970ರ ಹೊತ್ತಿಗೆ ರಷ್ಯಾ ಕೂಡ ಚಂದ್ರನ ಶಿಲೆಯನ್ನು ತಂದಿತ್ತು. ಅದರ ಒಟ್ಟು ಮೊತ್ತ 301 ಗ್ರಾಂ ಅಷ್ಟೇ. ಈ ಪೈಕಿ 200 ಮಿಲಿಗ್ರಾಂ ಚೂರನ್ನು ಅಮೆರಿಕದಲ್ಲಿರುವ ಬ್ರಿಟಿಷ್ ಬಹುರಾಷ್ಟ್ರೀಯ ಕಂಪನಿ 'ಸೊತೆ ಬಿ'ಗೆ 4,42,500 ಅಮೆರಿಕನ್ ಡಾಲರ್‌ಗೆ 1993ರಲ್ಲಿ ಮಾರಿತ್ತು. ಮತ್ತೆ ಅದೇ ಕಂಪನಿಗೆ 2018ರಲ್ಲಿ ಸಣ್ಣ ಶಿಲಾ ಚೂರುಗಳನ್ನು 8,55,000 ಡಾಲರ್‌ಗೆ ಮಾರಿತ್ತು. ಇದರಿಂದ ರಷ್ಯಾದ ಯಾವ ಬವಣೆ ತೀರಿತೋ ತಿಳಿಯದು. ಆದರೆ 'ಸೊತೆ ಬಿ' ಸಂಸ್ಥೆಯ ಪ್ರತಿಷ್ಠೆ ಮಾತ್ರ ಗಗನದೆತ್ತರಕ್ಕೆ ಏರಿತ್ತು.


